


**ಎಡದಿಂದ ಬಲಕ್ಕೆ**

1. ಅಪ್ಪನಾಗಿದ್ದವನ ಈ ಸ್ವರೂಪ ಬಹಳ ವಿರಳ 4
3. ಹಸು ಸಾಕಣೆಯೂ ಈಗೀಗ ಧೈರ್ಯವಂತರದೇ ಒಂದು ಕೆಲಸ 3
4. ಸಾರಾಯಿ ನಿಷೇಧಿಸಬೇಕೆಂದು ಅರಸ ಬರೆದ ಪತ್ರ ಇದು 3
6. ಮಳೆ ಬಂದೊಡನೆ ಹೊಮ್ಮುವುದು ಇದಾವ ಪರಿಯ ಸುವಾಸನೆ? 4
7. ಮರೆತು ಬಂದದ್ದು ಏಕೆ? ಅದೊಂದು ಬಗೆಯ ರತ್ನಮಣಿ 4
9. ನಾವಿರುವ ಈಗಿನ ಹೊಸ ಕಾಲಾವಧಿ 4
12. ನಯವಾದ ಮಾತುಗಳಿಂದಲೇ ಪ್ರಸಿದ್ಧನಾಗಿದ್ದಾನೆ ಈ ವಕೀಲ 4
14. ಎಂಟನೇ ತರಗತಿಯವರಿಗೆ ತೋರಿಸಿದ್ದು ಮಣ್ಣಿನ ಮಡಿಕೆ ಮಾಡುವ ಚಕ್ರ 3
15. ಪಲ್ಲಂಗವನ್ನೇ ಕದ್ದು ಸಾಗಿಸಿದ ನೋಡಿ ಮಹಾ ಪುಂಡ ಮನುಷ್ಯ 3
16. ಎಲ್ಲರೂ ಸೇರಲು ತಕ್ಕಂತಿರುವುದು ದೇವತಾ ಗೃಹ 4

**ಮೇಲಿನಿಂದ ಕೆಳಕ್ಕೆ**

1. ಅಷ್ಟ ದಳಗಳ ಈ ಹೂವಿನ ಸೌಂದರ್ಯಕ್ಕೆ ಹೋಲಿಕೆಯೇ ಇಲ್ಲ 4
2. ರಾಮನದು ಬೇರಾರಿಗೂ ಹೋಲಿಸಲಾಗದಂಥ ಶಕ್ತಿ, ಶೌರ್ಯ 4
3. ಸಾವಿರಾರು ರಾಗಗಳಲ್ಲಿ ಇದೂ ಒಂದು ಸುಂದರ ಸಂಗೀತ ರಾಗ 3
5. ಈತ ಸರಕಾರೀ ಕೆಲಸಗಾರನಿಗೆ ಸಮನಾದವನೇ ಹೌದು 3
6. ಸೇನಾ ಪಾಳಯವನ್ನು ಕಂಡದ್ದೇ ತಡ, ಹೆದರಿ ಓಡಿಹೋದದ್ದು 4
8. ಹಳತಾದರೂ ಸಂಪೂರ್ಣ ದೃಢವಾಗಿರುವ ಅಡಿಪಾಯ 4
10. ಸತಿಯೊಡನೆ ಜೀವಿಸಲು ತಕ್ಕಂತಿದೆ ಈ ವಾಸಸ್ಥಳ 3
11. ಅಸಹ್ಯ ವೇಷ ಧರಿಸಿ ಬಂದವರನ್ನು ಬೈದು ಹೆದರಿಸು 4
12. ಅನ್ಯಾಯವನ್ನು ಸರಿಪಡಿಸಲು ಹೀಗೊಂದು ಮನೆ 4
13. ಒಳ್ಳೆಯದಾಗಲೆಂದು ಮೊದಲು ನುಡಿಸಿದ್ದು ಈ ಮಂಗಳವಾದ್ಯ 3

---

**26–06–2025 ಉತ್ತರಗಳು**

**ಎಡದಿಂದ ಬಲಕ್ಕೆ**

1. ಅಧಮ 3. ಸಂಕೋಚ 4. ದ್ರಾವಕ 6. ಲಕ್ಷಿಸು 7. ಆರೋಹಣ 9. ಅಜಗರ 11. ಕರಂಡಕ 13. ನರೋತ್ತಮ 15. ಪಾಣಿನಿ 17. ರುದ್ರಾಕ್ಷಿ 18. ರಾಹುತ 19. ಕರಾಳ

**ಮೇಲಿನಿಂದ ಕೆಳಕ್ಕೆ**

1. ಅಚಲ 2. ಮದ್ರಾಸು 3. ಸಂದೇಹ 5. ಕಣಜ 7. ಆಧುನಿಕ 8. ಣವಾಡಿಕ (=ಕಡಿವಾಣ ಹಿಂದುಮುಂದು) 9. ಅವಮಾನ 10. ರಮ್ಯಧಾಮ 12. ಡಮರು (=ಡಮರುಗ) 14. ರೋಹಿತ 15. ಪಾಕ್ಷಿಕ 16. ನಿರಾಳ

ಪ್ರಶ್ನಾಂಕಣ

# ಧ್ರುವ ಪ್ರವಾಸ: ಏನದರ ಅರ್ಥ, ಅನರ್ಥ?

ಉತ್ತರ ಧ್ರುವವನ್ನೊಳಗೊಂಡು ಧರೆಯ ಶಿರದಂತಿರುವ ಆರ್ಕ್ಟಿಕ್ ಪ್ರದೇಶ (ಚಿತ್ರ1) ಮತ್ತು ದಕ್ಷಿಣ ಧ್ರುವವನ್ನೊಳಗೊಂಡು ಧರೆಯ ತಳದಂತಿರುವ ಅಂಟಾರ್ಕ್ಟಿಕಾ ಭೂಖಂಡ (ಚಿತ್ರ 4). ಪೃಥ್ವಿಯ ಇನ್ನೆಲ್ಲ ಪ್ರದೇಶಗಳಿಂದ ಸಂಪೂರ್ಣ ಭಿನ್ನವಾಗಿರುವ ಅನ್ಯಲೋಕ ಸದೃಶ ಭೂ ನೆಲೆಗಳು ಇವು. ಶಾಶ್ವತ ಹಿಮ ಮುಸುಕಿದ ನೆಲ ಮತ್ತು ತೇಲು ಹಿಮದಿಂದ ಆವರಿಸಲ್ಪಟ್ಟ ಕಡಲು ಇವು ಈ ಪ್ರದೇಶಗಳ ಪ್ರಮುಖ ವೈಶಿಷ್ಟ್ಯಗಳು. ಆರ್ಕ್ಟಿಕ್ ಪ್ರದೇಶ ಮತ್ತು ಅಂಟಾರ್ಕ್ಟಿಕಾ ಭೂಖಂಡ ಇವೆರಡೂ ಭೂನೆಲೆಗಳು ಹಿಮಾಚ್ಛಾದಿತವಾಗಿದ್ದರೂ, ಅಸಹನೀಯ ಚಳಿಯಿಂದ ಕೂಡಿದ್ದರೂ ಈ ಪ್ರತಿ ನೆಲೆಯೂ ವಿಶಿಷ್ಟ ಜೀವಾವಾರವಾಗಿದೆ. ಈ ಪ್ರತಿ ನೆಲೆಯಲ್ಲೂ ಅಲ್ಲಿನದೇ ಆದ, ಬುವಿಯ ಬೇರೆಲ್ಲೂ ಕಾಣಸಿಗದ ಜೀವಿಗಳು ನೆಲೆಸಿವೆ. ಆರ್ಕ್ಟಿಕ್‌ನ ಧ್ರುವ ಕರಡಿ (ಚಿತ್ರ 2) ಮತ್ತು ಅಂಟಾರ್ಕ್ಟಿಕಾದ ಚಕ್ರವರ್ತಿ ಪೆಂಗ್ವಿನ್ (ಚಿತ್ರ 3) ಅಂತಹ ಒಂದೊಂದು ಉದಾಹರಣೆಗಳು. ಅಂಟಾರ್ಕ್ಟಿಕಾ ಯಾವ ದೇಶಕ್ಕೂ ಸೇರಿಲ್ಲದಿದ್ದರೂ ಆರ್ಕ್ಟಿಕ್ ಪ್ರದೇಶದಲ್ಲಿ ಎಂಟು ರಾಷ್ಟ್ರಗಳು ಭಾಗ ಹೊಂದಿವೆ!

ನೇರ ಕಾಣ ಬಂದವರನ್ನು ಬೆರಗುಗೊಳಿಸುವ ಈ ರುದ್ರ ರಮ್ಯ ಅನನ್ಯ ಸ್ವರೂಪಗಳ ಈ ಎರಡೂ ಧ್ರುವ ಪ್ರದೇಶಗಳು ಸಹಜವಾಗಿಯೇ ಪ್ರವಾಸೀ ಪ್ರಿಯ ತಾಣಗಳಾಗಿವೆ. ಆರ್ಕ್ಟಿಕ್ ಪ್ರದೇಶಕ್ಕೆ ಹೋಗಿಬರುವ ಪ್ರವಾಸಿಗಳ ಸಂಖ್ಯೆ ವರ್ಷಕ್ಕೆ ಎಂಬತ್ತು ಲಕ್ಷವನ್ನು ದಾಟಿದೆ; ಅಂಟಾರ್ಕ್ಟಿಕಾಗೆ ಭೇಟಿ ನೀಡುವ ಪ್ರವಾಸಿಗಳ ಸಂಖ್ಯೆ ವರ್ಷಕ್ಕೆ ಒಂದು ಲಕ್ಷವನ್ನು ಮೀರಿದೆ!

ಸ್ಪಷ್ಟವಾಗಿಯೇ ವಿಶಿಷ್ಟ ಪರಿಸರಗಳನ್ನು ಹೊಂದಿರುವ ಮತ್ತು ತುಂಬ ಸೂಕ್ಷ್ಮ ಜೀವಾವಾರಗಳೂ ಆಗಿರುವ ಈ ಎರಡೂ ಪ್ರದೇಶಗಳ ಮೇಲೆ ಮನುಷ್ಯರ ಧ್ರುವ ಪ್ರವಾಸ ಬಹಳ ಅನರ್ಥಕಾರಿಯಾಗಿದೆ. ಪ್ರವಾಸಿಗರನ್ನು ಹೊತ್ತು ತರುವ ಬೃಹತ್ ಐಷಾರಾಮೀ ಹಡಗುಗಳು ಉರಿಸುವ ಇಂಧನದಿಂದ ಹೊರಹೊಮ್ಮುವ ಹೊಗೆ ಮತ್ತು ವಿಷಾನಿಲಗಳು ಆ ಪ್ರದೇಶಗಳ ವಾತಾವರಣವನ್ನು ಅಧ್ವಾನಗೊಳಿಸುತ್ತಿವೆ. ಲಕ್ಷಾಂತರ ಪ್ರವಾಸಿಗರು ಉತ್ಪಾದಿಸುವ ರಾಶಿ ರಾಶಿ ಕಸ ಕೊಳಚೆಗಳು ಅಲ್ಲಿನ ನೆಲ ಕಡಲುಗಳನ್ನು ಹಾಳುಗೆಡಹುತ್ತಿವೆ. ಅಷ್ಟೊಂದು ಜನರ ಓಡಾಟದಿಂದ ಕಂಗೆಡುವ ಆ ಪ್ರದೇಶಗಳ ಪ್ರಾಣಿ ಪಕ್ಷಿಗಳು ತಮ್ಮ ಸಂತಾನಾಭಿವೃದ್ಧಿಗೆ ಹೊಸ ನೆಲೆಗಳನ್ನು ಹುಡುಕಿಕೊಳ್ಳುತ್ತಿವೆ. ಪ್ರವಾಸಿಗರೊಡನೆ ಹಡಗುಗಳಲ್ಲಿ ಅಡಗಿ ಬರುವ ಪಿಡುಗುಕಾರಕ ಅನ್ಯ ಜೀವಿಗಳು ಮತ್ತು ರೋಗಕಾರಕ ಸೂಕ್ಷ್ಮಜೀವಿಗಳು ನೆಲಕ್ಕೆ ಇಳಿದು ಅಲ್ಲಿನ ಸ್ಥಳೀಯ ಜೀವಿಗಳಿಗೆ ಅಪಾಯಕಾರಿಯಾಗುವ ಸಾಧ್ಯತೆಗಳೂ ಹೆಚ್ಚುತ್ತಿವೆ.

ಆದರೆ ಧ್ರುವ ಪ್ರವಾಸದಿಂದ ಒದಗಿ ಬರುವ ಆರ್ಥಿಕ ಮತ್ತು ಶೈಕ್ಷಣಿಕ ಲಾಭಗಳೂ ಹಲವಾರಿವೆ. ಧ್ರುವ ಪ್ರದೇಶಗಳ ನೇರ ವೀಕ್ಷಣೆಯ ರೋಮಾಂಚಕ ಅನುಭವ ಪರಿಸರ ಸಂರಕ್ಷಣೆಯ ಅಗತ್ಯ ಮತ್ತು ಮಹತ್ವಗಳ ಅಮೂಲ್ಯ ಶಿಕ್ಷಣವನ್ನು ನೀಡುತ್ತದೆ. ಪ್ರವಾಸಿಗರಿಂದ ಸಂಗ್ರಹವಾಗುವ ಹಣ ಬೇಕಾದಷ್ಟು ಉದ್ಯೋಗಗಳನ್ನು ಒದಗಿಸುತ್ತಿದೆ; ನಿಸರ್ಗ ಸಂರಕ್ಷಣೆಗೆ ಸಂಪನ್ಮೂಲವೂ ಆಗುತ್ತಿದೆ.



■ ಎನ್. ವಾಸುದೇವ್